# ಸಂತ ಅಲೋಶಿಯಸ್ ಕಾಲೇಜು

(ಪದವಿ ಹಾಗೂ ಪದವಿ ಪೂರ್ವ ಕಾಲೇಜು)

ಅಮರಾವತಿ, ಹರಿಹರ 577 601.

ತ್ರಿವಿಧ ದಾಸೋಹಿ,
ಮಮತಾಮಯಿ ಹೃದಯಿ
ಶಿಸ್ತಿನ ಸಿಪಾಯಿ
ಸರ್ವರೂ ಮೆಚ್ಚಿದ ಮಾನವತಾವಾದಿ
**ಶ್ರೀ ಶ್ರೀ ಶ್ರೀ ಡಾ|| ಶಿವಕುಮಾರಸ್ವಾಮೀಜಿ**
ನಮ್ಮ ಮಕ್ಕಳನ್ನು ಅನುಗ್ರಹಿಸಿ

"ಇತರರಿಗಾಗಿ ಜೀವಿಸದ
ಜೀವನವು ಜೀವನವೇ ಅಲ್ಲ".




**ಮದರ್ ತೆರೆಸಾ**




ಸಹಜ ಪ್ರೀತಿ ಕಲ್ಲನ್ನೂ ಕರಗಿಸುತ್ತದೆ,
ಕಟುಕನನ್ನೂ ಕರುಣಾಮಯಿಯನ್ನಾಗಿಸುತ್ತದೆ.

"ನಿದ್ದೆಯಲ್ಲಿ ಕಾಣುವಂಥದ್ದು ಕನಸಲ್ಲ
ನಿದ್ದೆಗೆಡುವಂತೆ ಮಾಡುವುದೇ
ನಿಜವಾದ ಕನಸು".



**ಎ.ಪಿ.ಜೆ. ಅಬ್ದುಲ್ ಕಲಾಂ**




Forming Men and Women for and with Others

# ಕೈಪಿಡಿ

2019-2020

St Aloysius for All Round Excellence

## ಆಶ್ರಯದಾತ

16ನೇ ಶತಮಾನದ ಇಟಲಿಯ ರಾಜ ಮನೆತನಕ್ಕೆ ಸೇರಿದ ಶ್ರೀಮಂತ ವ್ಯಕ್ತಿಗಳಲ್ಲಿ ಸಂತ ಅಲೋಶಿಯಸ್ ಗೊಂಜಾಗ ಕೂಡ ಒಬ್ಬರು. ತಮ್ಮ 18ನೇ ವಯಸ್ಸಿನಲ್ಲಿ ತಮ್ಮ ರಾಜ ಮನೆತನವನ್ನು ಬಿಟ್ಟು ಯೇಸುವಿನ ಅನುಯಾಯಿಯಾಗಿ ಇತರರಿಗೆ ಸಹಾಯ ಮಾಡುತ್ತ. ಅದರಲ್ಲಿ ದೇವರನ್ನು ಕಾಣುವ ಭರವಸೆಯನ್ನು ಹೊಂದಿದ್ದರು. ತಮ್ಮ 16ನೇ ವಯಸ್ಸಿನಲ್ಲಿಯೇ ಶಿಸ್ತು ಸಂಯಮ ಮತ್ತು ಪರೋಪಕಾರಗುಣಗಳನ್ನು ಮೈಗೂಡಿಸಿಕೊಂಡು ತರಬೇತಿಯನ್ನು ಪಡೆಯುತ್ತಿರುವಾಗ ರೋಮ್ ನಗರದಲ್ಲಿ ಪ್ಲೇಗ್ ರೋಗ ಆವರಿಸಿತು. ಆಗ ಅಲೋಶೀಯಸ್‌ರವರು ಪ್ಲೇಗ್ ರೋಗಿಗಳ ಆರೈಕೆ ಮಾಡಲು ಮುಂದಾದರು. ಹೀಗೆ ಆರೈಕೆ ಮಾಡುತ್ತಿರುವಾಗ ಇವರೂ ಕೂಡ ಪ್ಲೇಗ್ ರೋಗಕ್ಕೆ ಬಲಿಯಾಗಿ ತಮ್ಮ 24ನೇ ವಯಸ್ಸಿನಲ್ಲಿ ವಿಧಿವಶವಾದರು. ನಿರ್ಗತಿಕರು ಬಡವರು, ರೋಗಿಗಳು. ಕೆಳವರ್ಗದವರು ಎಂಬ ಭೇದವಿಲ್ಲದೆ ಇವರು ಮಾಡಿದ ನಿಸ್ವಾರ್ಥ ಸೇವೆಯನ್ನು ಜಗತ್ತಿನೆಲ್ಲೆಡೆ ಹರಡಲೆಂದು ಇವರನ್ನು ಮಾದರಿಯಾಗಿ ತೆಗೆದುಕೊಂಡ ಜೆಸ್ವಿಟ್ ಸಂಸ್ಥೆಗಳು ಇವರನ್ನೇ ತಮ್ಮ ಪಾಲಕ ಸಂತರನ್ನಾಗಿ ಆರಿಸಿ, ಇವರ ಹೆಸರನ್ನು ತಮ್ಮ ಶಿಕ್ಷಣ ಸಂಸ್ಥೆಗಳಿಗೆ ಬಳಸಿಕೊಂಡರು. ಇದರೊಂದಿಗೆ ಕರುಣೆ ಮತ್ತು ನಿಸ್ವಾರ್ಥ ಸೇವಾ ಮನೋಭಾವ ದೊಂದಿಗೆ ಶಿಕ್ಷಣ ಸಂಸ್ಥೆಗಳು ನಡೆಯುತ್ತಿವೆ.

# ವಿದ್ಯಾಲಯ

ಹರಿಹರದ ಅಮರಾವತಿಯ ಸಂತ ಅಲೋಶಿಯಸ್ ಪದವಿ ಪೂರ್ವ ಹಾಗೂ ಪದವಿ ಕಾಲೇಜು, ಮಂಗಳೂರಿನ ಜೆಸ್ವಿಟ್ (ಯೇಸು ಸಭೆ) ಶಿಕ್ಷಣ ಸಂಸ್ಥೆಯ ಅಂಗವಾಗಿದೆ. ಇದು ಸೊಸೈಟಿಯ ರಿಜಿಸ್ಟ್ರೇಶನ್ ಕಾಯ್ದೆ 1869ರ ಅಡಿಯಲ್ಲಿ ಬರುತ್ತದೆ. ಎಲ್ಲಾ ಜಾತಿ ಧರ್ಮಗಳ ಮಕ್ಕಳಿಗೆ ಸಮಾನವಾದ ಶಿಕ್ಷಣವನ್ನು ನೀಡುವ ಉದ್ದೇಶವನ್ನು ಈ ಸಂಸ್ಥೆಯು ಹೊಂದಿದೆ. ಅದಕ್ಕಿಂತಲೂ ಮಿಗಿಲಾಗಿ ಬಡವರ್ಗದ ಹಾಗೂ ನಿರ್ಗತಿಕ ಮಕ್ಕಳಿಗೆ ಶಿಕ್ಷಣ ದೊರೆಯುವಂತೆ ಮಾಡುವುದು ಇದರ ಮುಖ್ಯ ಉದ್ದೇಶವಾಗಿದೆ. ಸರ್ವರಿಗೂ ಸಮಾನತೆ ಹಾಗೂ ಗೌರವ ನೀಡುವುದು ಇದರ ಧ್ಯೇಯವಾಗಿದೆ.

# ವಿಶ್ವದೆಲ್ಲೆಡೆ ಜೆಸ್ವಿಟ್ ಸಂಸ್ಥೆಗಳು

ಪ್ರಪಂಚದಾದ್ಯಂತ ಸಾವಿರಾರು ಜೆಸ್ವಿಟ್ ಸಂಸ್ಥೆಗಳು ಹಲವು ಬಗೆಯ ಮೌಲ್ಯಯುತ ಶಿಕ್ಷಣವನ್ನು ನೀಡುತ್ತಿವೆ. ಅವುಗಳಲ್ಲಿ ಅಮೆರಿಕಾದಲ್ಲಿಯೇ 18 ರಾಜ್ಯಗಳಲ್ಲಿ ಸೇವೆ ಸಲ್ಲಿಸುತ್ತಿವೆ. 221 ಕ್ಯಾಥೋಲಿಕ್ ಸಂಸ್ಥೆಗಳು ಹಾಗೂ 1600 ಸ್ವತಂತ್ರ ಕಾಲೇಜುಗಳು. ಮತ್ತು ವಿಶ್ವವಿಧ್ಯಾನಿಲಯಗಳು ಕಾರ್ಯ ನಿರ್ವಹಿಸುತ್ತಿವೆ.

# ಭಾರತದಲ್ಲಿ ಜೆಸ್ವಿಟ್ ಸಂಸ್ಥೆಗಳು

ಭಾರತದ ಹಲವಾರು ರಾಜ್ಯಗಳಲ್ಲಿ ಜೆಸ್ವಿಟ್ ಸಂಸ್ಥೆಯ ಅಡಿಯಲ್ಲಿ ಅನೇಕ ಶಾಲಾ ಕಾಲೇಜುಗಳು ಸೇವೆ ಸಲ್ಲಿಸುತ್ತಿವೆ.

ಲೊಯೊಲಾ ಅಕಾಡೆಮಿ ಸಿಕಂದರಾಬಾದ್, ಚೆನ್ನೈನಲ್ಲಿರುವ ಲೊಯೊಲಾ ಶಿಕ್ಷಣ ಮಹಾವಿದ್ಯಾಲಯ, ಲೊಯೊಲಾ ಸಮಾಜ ವಿಜ್ಞಾನ ಕಾಲೇಜು, ಲೊಯೊಲಾ ಇನ್‌ಸ್ಟಿಟ್ಯೂಟ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಶನ್, ಲೊಯೊಲಾ ತಂತ್ರಜ್ಞಾನ ಮತ್ತು ವಿಜ್ಞಾನ ಕಾಲೇಜು, ಲೊಯೊಲಾ ತಂತ್ರಜ್ಞಾನ ಸಂಸ್ಥೆ ಮಧುರೈ ನಗರದಲ್ಲಿದೆ. ಅಲ್ಲದೆ ಆಂಧ್ರಪ್ರದೇಶ, ಪಾಟ್ನಾ, ಬಿಹಾರ ಹಾಗೂ ಕರ್ನಾಟಕದ ಬೆಂಗಳೂರು, ಹಾಸನ, ಮಂಗಳೂರು, ಮಾನ್ವಿ ಸೇರಿದಂತೆ ಹಲವಾರು ಕಡೆಗಳಲ್ಲಿ ಜೆಸ್ವಿಟ್ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಅವುಗಳಲ್ಲಿ ಹರಿಹರದ ನಮ್ಮ ಸಂತ ಅಲೋಶಿಯಸ್ ಕಾಲೇಜು ಕೂಡ ಒಂದಾಗಿದೆ.



# ಧ್ಯೇಯ ವಾಕ್ಯ

## 'Lucet et Ardet' Shine to Enkindle

ನಮ್ಮ ಕಾಲೇಜಿನ ಧ್ಯೇಯ ವಾಕ್ಯವನ್ನು ಲ್ಯಾಟಿನ್ ಭಾಷೆಯ Lucet Et Ardet ಎಂಬ ಪದಗಳಿಂದ ಆಯ್ದ ಆಂಗ್ಲ ರೂಪಾಂತರ 'Shine to Enkindle' ಎಂಬ ಪದ ಪುಂಜದಿಂದ ಆಯ್ದುಕೊಳ್ಳಲಾಗಿದೆ.

ಇದರ ಅನ್ವಯ ನಮ್ಮ ರಾಷ್ಟ್ರಕ್ಕಾಗಿ, ಉತ್ತಮ ಜ್ಞಾನ ಹಾಗೂ ಸೃಜನಶೀಲತೆಯ ಮನಸ್ಸನ್ನು ಹೊಂದುವ ಪುರುಷ ಹಾಗೂ ಮಹಿಳೆಯರಿಗೆ ಪ್ರಸ್ತುತ ಪಡಿಸುತ್ತದೆ. ಆಳವಾದ ಆಸೆ ಮತ್ತು ಇತರರಿಗೆ ನಿಜವಾದ ಪ್ರೀತಿ ಮತ್ತು ಕಾಳಜಿಯನ್ನು ಹೊಂದುವ ವ್ಯಕ್ತಿಗಳನ್ನಾಗಿ ರೂಪಿಸುವುದು ಎಂದರ್ಥ.

# ಗುರಿಗಳು ಮತ್ತು ಉದ್ದೇಶಗಳು

ಜೆಸ್ವಿಟ್ ಶಿಕ್ಷಣ ಸಂಸ್ಥೆಯ ಮೂಲ ಉದ್ದೇಶ ಮಾನವ ತಾನು ಬೆಳೆಯುವುದಲ್ಲದೆ, ಇತರರಿಗೂ ಸಹಾಯಕನಾಗಿ ರೂಪಾಂತರಗೊಳ್ಳುವುದು, ವಂದನೀಯ ಗುರುಗಳಾದ Fr. Arturo Sosa SJ, ಯವರ ನೇತೃತ್ವದಲ್ಲಿ ಜೆಸ್ವಿಟ್ ಶಿಕ್ಷಣ ಸಂಸ್ಥೆಗಳು ದೇಶಾದ್ಯಂತ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿದ್ದು, ಸಂತ ಇಗ್ನೇಶಿಯಸ್ ಲೊಯೋಲಾರವರ ತತ್ವಗಳನ್ನು ಆದರಿಸಿ ಗಂಡು – ಹೆಣ್ಣುಗಳೆಂಬ ಭೇದವಿಲ್ಲದೆ. ಸಮಾನವಾಗಿ ಶಿಕ್ಷಣ ನೀಡುತ್ತಿವೆ. ಜೀವನ ಮೌಲ್ಯಗಳಾದ ನೈತಿಕತೆ, ಭಾವನಾತ್ಮಕತೆ, ಆಧ್ಯಾತ್ಮಿಕತೆ, ಸಂಸ್ಕೃತಿ, ಸಮಾಜಸೇವೆಗಳೊಂದಿಗೆ ಉತ್ತಮ ಪ್ರಜೆಗಳನ್ನಾಗಿ ಮಾಡುವಲ್ಲಿ ಶ್ರಮಿಸುತ್ತಿವೆ. ಆರ್ಥಿಕವಾಗಿ ಹಾಗೂ ಸಮಾಜಕರಕವಾಗಿ ಕೆಳ ಅಂಚಿನಲ್ಲಿರುವ ಶಿಕ್ಷಣದಿಂದ ವಂಚಿರಾಗಿರುವ ಮಕ್ಕಳಿಗೆ ಸೂಕ್ತ ಶಿಕ್ಷಣ ದೊರೆಯುವಂತೆ ಮಾಡುವುದೇ ಇದರ ಧ್ಯೇಯವಾಗಿದೆ. ಹರಿಹರದ ನಮ್ಮ ಕಾಲೇಜು ಸಹ ಇಂತಹದೇ ಉದ್ದೇಶಗಳೊಂದಿಗೆ ಕಳೆದ 13 ವರ್ಷಗಳಿಂದ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಬೇಕಾದ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮೌಲ್ಯಯುತ ಶಿಕ್ಷಣದೊಂದಿಗೆ ಒದಗಿಸುತ್ತಾ ಬಂದಿದೆ. ಈ ವರ್ಷ ಸಂತ ಅಲೋಶಿಯಸ್ ಗೊಂಜಾಗರವರ 450ನೇ ಜನ್ಮಶತಮಾನೋತ್ಸವವನ್ನು ಆಚರಿಸುತ್ತಿರುವಾಗ. ಇದಕ್ಕಾಗಿ ಶ್ರಮಿಸುತ್ತಿರುವ ಸರ್ವರನ್ನು ಸ್ಮರಿಸುತ್ತೇವೆ. ಇನ್ನು ಮುಂದೆಯೂ ಸಹ ಉತ್ತಮ ಶಿಕ್ಷಣವನ್ನು ನೀಡುವ ಭರವಸೆ ನೀಡುತ್ತೇವೆ.

# ಸೌಲಭ್ಯಗಳು

## ಸಮವಸ್ತ್ರ ಪುಸ್ತಕ ಮತ್ತು ಕ್ಯಾಂಟಿನ್

ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪುಸ್ತಕ ಸಮವಸ್ತ್ರಕೊಳ್ಳಲು ಅವಕಾಶವಿದೆ. ಹಾಗೂ ರಿಯಾಯಿತಿ ದರದಲ್ಲಿ ಊಟೋಪಚಾರದ ಕ್ಯಾಂಟಿನ್ ಸೌಲಭ್ಯವಿದೆ.

## ಗ್ರಂಥಾಲಯ

5000 ಪುಸ್ತಕಗಳನ್ನು ಒಳಗೊಂಡ ಅತ್ಯಂತ ವಿಶಾಲವಾದ ಗ್ರಂಥಾಲಯ ಸೌಲಭ್ಯವಿದೆ ಮತ್ತು ವಾಚನಾಲಯವಿದೆ.

## ಕ್ರೀಡಾಂಗಣ

ಹಾಕಿ, ಪುಟ್ಬಾಲ್, ಕ್ರಿಕೆಟ್, ತ್ರೋಬಾಲ್, ಕಬಡ್ಡಿ, ಬ್ಯಾಡ್ಮಿಂಟನ್ ಮುಂತಾದ ಕ್ರೀಡೆಗಳಿಗೆ ತರಬೇತಿ ನೀಡಲು ವಿಶಾಲವಾದ, ಸುಸಜ್ಜಿತ ಕ್ರೀಡಾಂಗಣವಿದೆ.

## ಪಠ್ಯೇತರ ಚಟುವಟಿಕೆಗಳು

ಪಠ್ಯ ಚಟುವಟಿಕೆಗಳ ಜೊತೆಗೆ ವಿವಿಧ ಸಾಂಸ್ಕೃತಿಕ, ಕ್ರೀಡೆ, ಸಂಗೀತ, ಸಾಹಿತ್ಯ, ವನಮಹೋತ್ಸವ ಮುಂತಾದ ಚಟುವಟಿಕೆಗಳೊಂದಿಗೆ, ಜಿಲ್ಲಾ ಹಾಗೂ ರಾಜ್ಯ ಮಟ್ಟದ ವಿವಿಧ ಸ್ಪರ್ಧೆಗಳಲ್ಲಿ ಮಕ್ಕಳು ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ.

## ವಾಹನ ಸೌಲಭ್ಯ

ದೂರದ ಪ್ರದೇಶಗಳಿಂದ ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲು, ಸುಸಜ್ಜಿತ ಬಸ್‌ಗಳ ವ್ಯವಸ್ಥೆ ಇದೆ.

## ಸಮನ್ವಯ ಕಾರ್ಯಕ್ರಮ

ಮಕ್ಕಳಲ್ಲಿ ಸರ್ವಧರ್ಮ ಸಾಮರಸ್ಯ ಮೂಡಿಸಲು ಸರ್ವಧರ್ಮ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಐಕ್ಯತಾ ಮನೋಭಾವ ಮೂಡಿಸುವ ಪ್ರಯತ್ನ ಮಾಡಲಾಗುತ್ತದೆ. ಅಲ್ಲದೆ ಎಲ್ಲಾ ಧರ್ಮಗಳ ಧಾರ್ಮಿಕ ಉತ್ಸವಗಳಲ್ಲಿ ಪಾಲ್ಗೊಳ್ಳಲು ಅವಕಾಶ ಮಾಡಿಕೊಡಲಾಗುತ್ತದೆ.



## ವೃತ್ತಿ ಮಾರ್ಗದರ್ಶನ

ವಿದ್ಯಾರ್ಥಿಗಳ ಆಸಕ್ತಿಗೆ ಅನುಗುಣವಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಳ್ಳಲು ಅನುಕೂಲವಾಗಲು, ವಿವಿಧ ಕಾರ್ಯಾಗಾರ ಮತ್ತು ಉಪನ್ಯಾಸ ಕಾರ್ಯಕ್ರಮಗಳಿಗೆ ಕಳುಹಿಸಿ ಕೊಡಲಾಗುವುದು.

## ಪೋಷಕ ಹಾಗೂ ಶಿಕ್ಷಕರ ಸಭೆ

ಪರೀಕ್ಷೆಗಳು ಮುಗಿದ ನಂತರ ಪೋಷಕರ ಶಿಕ್ಷಕರ ಸಭೆಯನ್ನು ಕರೆದು, ಮಕ್ಕಳ ಕಲಿಕಾ ಮಟ್ಟವನ್ನು ತಿಳಿಯಲು ಅವಕಾಶ ಮಾಡಿಕೊಡಲಾಗುತ್ತದೆ.

## ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಹಾಸ್ಟೆಲ್



1. ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಸುಸಜ್ಜಿತವಾದ ಹಾಸ್ಟೆಲ್ ಸೌಲಭ್ಯವಿರುತ್ತದೆ. ಉತ್ತಮ ಗುಣಮಟ್ಟದ, ಆರೋಗ್ಯಕರವಾದ, ರುಚಿ - ಶುಚಿ ಯಾದ ಊಟ - ತಿಂಡಿ ವ್ಯವಸ್ಥೆ ಇದೆ.
2. ಸಸ್ಯಹಾರಿ ಮತ್ತು ಮಾಂಸಹಾರಿಗಳಿಗೆ ಪ್ರತ್ಯೇಕ ಊಟದ ಕೋಣೆ ಇರುತ್ತದೆ.
3. ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ 50% ಸೀಟುಗಳನ್ನು ಕಾದಿರಿಸಲಾಗುತ್ತದೆ.



## ವೃತ್ತಿಪರ ಪ್ರವೇಶ ಪರೀಕ್ಷಾ ತರಬೇತಿ

ನಿಗದಿತ ತರಗತಿಗಳು ಮುಗಿದ ನಂತರ NEET, JEE, COMED K, CPT ಮತ್ತು CLAT ವೃತ್ತಿಪರ ಕೋರ್ಸ್ ಪರೀಕ್ಷೆಗಳಿಗೆ ಸಿದ್ಧತೆ ನಡೆಸಲು ತರಬೇತಿಗಳನ್ನು ನೀಡಲಾಗುತ್ತದೆ.

## ಸಂಘ, ಸಮಿತಿ ಹಾಗೂ ವೇದಿಕೆ



- ಜೀವಶಾಸ್ತ್ರಕೂಟ
- ಭೌತಶಾಸ್ತ್ರಕೂಟ
- ಗಣಿತಶಾಸ್ತ್ರಕೂಟ
- ಗಣಕಶಾಸ್ತ್ರಕೂಟ
- ಕನ್ನಡ ಸಂಘ
- ಹಿಂದಿ ಸಂಘ
- ವಾಣಿಜ್ಯಶಾಸ್ತ್ರ ಸಮಿತಿ
- ಮಾನವಿಕ ಸಮಿತಿ (Humanities)
- ಟ್ರಕ್ಕಿಂಗ್ ವ್ಯವಸ್ಥೆ
- ಯೋಗಕೂಟ
- ಎನ್. ಎಸ್. ಎಸ್
- ರಂಗಭೂಮಿ ಪರಿಚಯ
- ಶೈಕ್ಷಣಿಕ ಪ್ರವಾಸ ಸಮಿತಿ
- ಕ್ರೀಡಾ ಸಮಿತಿ
- ಮಹಿಳಾವೇದಿಕೆ ಇತ್ಯಾದಿ.

# COURSES WE OFFER

## PUC

PUC : • Science • Commerce • Arts

### Science

**PCMB:** Physics, Chemistry, Maths, Biology
**PCMC:** Physics, Chemistry, Maths, Computer Science
**PCME:** Physics, Chemistry, Maths, Electronic
**PCMS:** Physics, Chemistry, Maths, Statistics

### Commerce

**HEBA** : History, Economics, Business Studies, Accountancy
**EBAS** : Economics, Business studies, Accountancy, Statistics
**EBACS:** Economics, Business studies, Accountancy, Comp Science

### Arts

**HEEK** : History, Economics, Education, Kannada
**HEPS** : History, Economics, Political Science, Sociology

## DEGREE

**B.Com**
(Davangere University)

ಸಂತ ಅಲೋಶಿಯಸ್ ಗೊಂಜಾಗರವರ 450ನೇ ಪುಣ್ಯ ಜಯಂತಿಯ ಪ್ರಯುಕ್ತ ಪಿಯುಸಿ ಮತ್ತು ಪದವಿ ತರಗತಿ ಪ್ರವೇಶಗಳಿಗೆ ಶುಲ್ಕದಲ್ಲಿ ವಿಶೇಷ ರಿಯಾಯಿತಿಯನ್ನು ಘೋಷಿಸಲಾಗಿದೆ.

**ಶುಲ್ಕ ರಿಯಾಯಿತಿ**
(Fee Concession)

**ಸಾಮಾನ್ಯ ಅಭ್ಯರ್ಥಿಗಳಿಗೆ :** ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಪರೀಕ್ಷೆಯಲ್ಲಿ 85% ಅಂಕಗಳೊಂದಿಗೆ ಉತ್ತೀರ್ಣರಾದವರಿಗೆ ಉಚಿತ ಪ್ರವೇಶಾವಕಾಶವಿರುತ್ತದೆ.

**ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ:** ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಪರೀಕ್ಷೆಯಲ್ಲಿ 75% ಅಂಕಗಳೊಂದಿಗೆ ಉತ್ತೀರ್ಣರಾದವರಿಗೆ ಉಚಿತ ಪ್ರವೇಶಾವಕಾಶವಿರುತ್ತದೆ.

**ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳಿಗೆ:** ಎಸ್.ಎಸ್.ಎಲ್.ಸಿ./ ಪಿ.ಯು.ಸಿ. ಪರೀಕ್ಷೆಯಲ್ಲಿ 70% ಅಂಕಗಳೊಂದಿಗೆ ಉತ್ತೀರ್ಣರಾದವರಿಗೆ ಉಚಿತ ಪ್ರವೇಶಾವಕಾಶವಿರುತ್ತದೆ.




ದಾವಣಗೆರೆ, ಹರಿಹರ, ಮಲೆಬೆನ್ನೂರು ಸ್ಥಳಗಳಿಂದ
ಕಾಲೇಜಿಗೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗಲು, ಸುಸಜ್ಜಿತ ಬಸ್‌ಗಳ ವ್ಯವಸ್ಥೆ ಇದೆ.







# ಸಂತ ಅಲೋಶಿಯಸ್ ಕಾಲೇಜು

(ಪದವಿ ಹಾಗೂ ಪದವಿ ಪೂರ್ವ ಕಾಲೇಜು)
ಅಮರಾವತಿ, ಹರಿಹರ 577 601.


Director
Fr Eric Mathias SJ
9449625563

Principal
Fr Santhosh Fernandes SJ
9964724205

Fr Pradeep Sequeira SJ
9483337715

Vice Principal :
Francine Fernandes
9901220947

Mousinulla
9036594739

E-mail : staloysiusharihar2010@gmail.com / ericmathiassj@gmail.com
Website : www.staloysiusharihar.com